MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | FRIDAY | 8-4-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜೋಳ ದರ ಉತ್ತಮ, ಸ್ಪಾಟ್ ದರ 2-6 ಶೇಕಡಾ ಹೆಚ್ಚಳ

ಸ್ಥಳೀಯ ಮಾರುಕಟ್ಟೆಗಳಲ್ಲಿ ಜೋಳ ದರ ಉತ್ತಮವಿದ್ದು, ಸ್ಪಾಟ್ ದರ 2-6 ಶೇಕಡಾ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಹಿಂದಿನ 2 ದಿನಗಳಲ್ಲಿ ಅಲ್ಪ ಸ್ವಲ್ಪ ಇಳಿಕೆಯಾಗಿದ್ದರೂ ದರ ಈಗ ಉತ್ತಮವಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲೂ ದರ ಉತ್ತಮವಿದ್ದು ಹೆಚ್ಚಳ ಕಂಡಿದೆ. ಬ್ರೆಜಿಲ್ ನ ಬೆಳೆ 2.48 ಮಿಲಿಯನ್ ಟನ್ ಹೆಚ್ಚಳ ಕಂಡಿದೆ.

## ಸೋಯಬೀನ್ ಫ್ಯೂಚರ್ ದರ ದೇಶೀ ಮಾರುಕಟ್ಟೆಯಲ್ಲಿ ಸ್ವಲ್ಪ ಇಳಿಕೆ

ದೇಶೀ ಮಾರುಕಟ್ಟೆಯಲ್ಲಿ ಸೋಯಬೀನ್ ಫ್ಯೂಚರ್ ದರ 0.75 ಶೇಕಡಾ ಅಥವಾ ಕ್ವಿಂ. ಗೆ ರೂ.67 ಇಳಿಕೆಯಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಸೋಯಬೀನ್ ಫ್ಯೂಚರ್ ದರ ಹೆಚ್ಚಳ ಕಂಡಿದೆ. ಸೋಯಬೀನ್ ದರ ಹೆಚ್ಚಳವಿದ್ದರೂ ಮಾರಾಟದ ಗಾತ್ರ ಇಳಿಕೆಯಾಗಿದೆ.

## ಭಾರತದ ಖಾದ್ಯತೈಲ ಆಮದು ಬಿಲ್ 2 ಬಿಲಿಯನ್ ಡಾಲರ್‌ಗೆ ಏರುವ ಸಾಧ್ಯತೆ

ಉಕ್ರೈನ್, ರಷ್ಯಾ ಸಂಘರ್ಷದ ನಂತರ ಜಾಗತಿಕ ಖಾದ್ಯತೈಲ ದರಗಳು ತೀವ್ರ ಹೆಚ್ಚಳವಾದುದರಿಂದ (ಸೂರ್ಯಕಾಂತಿ ಎಣ್ಣೆ ದರ ಟನ್‌ಗೆ $ 1500 ನಿಂದ $ 2050 ಗೆ ಹೆಚ್ಚಳ, ಹಾಗೂ ಪಾಮೆಣ್ಣೆ, ಸೋಯಾಬೀನ್ ಎಣ್ಣೆಗಳ ದರಗಳೂ ಹೆಚ್ಚಳ) ಭಾರತದ ಈ ವರ್ಷದ ಖಾದ್ಯತೈಲ ಆಮದು ಬಿಲ್ 2 ಬಿಲಿಯನ್ ಡಾಲರ್‌ಗಳಿಗೆ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

## ಅಂತರಾಷ್ಟ್ರೀಯ ಕಚ್ಚಾ ಸಕ್ಕರೆ ದರ ಹೆಚ್ಚಳ

ಅಂತರಾಷ್ಟ್ರೀಯ ಕಚ್ಚಾ ಸಕ್ಕರೆ ದರ ಒಂದು ತಿಂಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಳಗೊಂಡಿದೆ. ಬೇಸಿಗೆಯ ತಂಪು ಪಾನೀಯ ಹಾಗೂ ಕೈಗಾರಿಕಾ ವಲಯದಿಂದ ಸಕ್ಕರೆ ಬೇಡಿಕೆ ಹೆಚ್ಚಳಗೊಂಡಿದ್ದು, ದೇಶೀ ಸ್ಥಳೀಯ ಮಾರುಕಟ್ಟೆಗಳಲ್ಲಿ ಸಕ್ಕರೆ ದರ ಹೆಚ್ಚಳವಾಗುವ ಸಂಭವವಿದೆ.